# ಕರ್ನಾಟಕ ವಿಧಾನ ಪರಿಷತ್ತು

1. **ಸದಸ್ಯರ ಹೆಸರು:** ಶ್ರೀ ಎನ್. ರವಿಕುಮಾರ್
2. **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:** 1028
3. **ಉತ್ತರಿಸಬೇಕಾದ ದಿನಾಂಕ:** 23-02-2024.

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕನಕಪುರ ತಾಲ್ಲೂಕು ಸಾತನೂರು ಹೋಬಳಿ ಅಚ್ಚಲು ಗ್ರಾಮ ಪಂಚಾಯಿತಿಯಲ್ಲಿ ರಾಷ್ಟ್ರೀಯ ಗ್ರಾಮೀಣ ಖಾತ್ರಿ ಯೋಜನೆಯ ಅಕ್ರಮಗಳ ಕುರಿತು ತನಿಖೆ ನಡೆಸಲು ನೇಮಕವಾಗಿರುವ ತನಿಖಾ ತಂಡ ವರದಿಯನ್ನು ನೀಡಿದೆಯೇ; ಸದರಿ ವರದಿಯ ಮೇಲೆ ಕೈಗೊಂಡ ಕ್ರಮಗಳೇನು; ವರದಿಯ ಪ್ರತಿಯೊಂದಿಗೆ ಕೈಗೊಂಡ ಕ್ರಮದ ಕುರಿತು ಸಮಗ್ರ ಮಾಹಿತಿ ನೀಡುವುದು; | ಅಚ್ಚಲು ಗ್ರಾಮ ಪಂಚಾಯಿತಿಯಲ್ಲಿ ಮಹಾತ್ಮಗಾಂಧಿ ನರೇಗಾ ಯೋಜನೆಯ ಕಾಮಗಾರಿಯ ಸಾಮಗ್ರಿ ವೆಚ್ಚವನ್ನು ಸಂಬಂಧಿಕರ ಹೆಸರಿನಲ್ಲಿ ಡ್ರಾ ಮಾಡಿರುತ್ತಾರೆ ಹಾಗೂ ಸದರಿ ಯೋಜನೆಯ ಫಲಾನುಭವಿಗಳಾಗಿ ಶಾಲಾ ವಿದ್ಯಾರ್ಥಿಗಳು, ಸರ್ಕಾರಿನೌಕಕರಿಗೆ ಜಾಬ್ ಕಾರ್ಡ್ ಮಾಡಿರುವುದಾಗಿ ಕಂಡು ಬಂದಿದ್ದು, ಅದರಂತೆ ಮುಖ್ಯ ಲೆಕ್ಕಾಧಿಕಾರಿ, ರಾಮನಗರ ಜಿಲ್ಲಾ ಪಂಚಾಯತ್ ರವರ ನೇತೃತ್ವದಲ್ಲಿ ತಂಡ ನಿಯೋಜಿಸಿದ್ದು, ಸದರಿ ತಂಡವು ಗ್ರಾಮ ಪಂಚಾಯಿತಿಯ ಸಿಬ್ಬಂದಿಗಳ ಸಹಯೋಗದೊಂದಿಗೆ ಪರಿಶೀಲನೆ ಮಾಡಿದಾಗ 2019-20 ರಿಂದ 2022-23ನೇ ಸಾಲಿನ ವರೆಗೆ ಮಹಾತ್ಮಗಾಂಧಿ ನರೇಗಾ ಯೋಜನೆಯಡಿ ಯಾವುದೇ ಅಧಿಕಾರಿಗಳ ಹಾಗೂ ವಿದ್ಯಾರ್ಥಿಗಳ ಹೆಸರಿನಲ್ಲಿ ಉದ್ಯೋಗ ಚೀಟಿಗಳಲ್ಲಿ ವಿತರಿಸಿರುವುದು ಕಂಡುಬಂದಿರುವುದಿಲ್ಲವೆಂದು ಹಾಗೂ ಸದರಿ ಗ್ರಾಮ ಪಂಚಾಯಿತಿಯಲ್ಲಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದವರ ವಂಶ ವೃಕ್ಷವನ್ನು ಪಡೆಯಲಾಗಿದ್ದು, MIS ತಂತ್ರಾಂಶದಲ್ಲಿ ಕಂಡು ಬಂದ ಸಾಮಗ್ರಿ ಸರಬರಾಜುದಾರರಿಗೂ ವಂಶವೃಕ್ಷದಲ್ಲಿರುವ ಸದಸ್ಯರ ಹೆಸರಿಗೂ ಯಾವುದೇ ಹೊಂದಾಣಿಕೆ ಇಲ್ಲದೇ ಇರುವುದರಿಂದ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ರವರು ತಮ್ಮ ಸಂಬಂಧಿಕರ ಹೆಸರಿನಲ್ಲಿ ಸಾಮಗ್ರಿ ಮೊತ್ತವನ್ನು ಪಡೆದಿರುವುದು ಕಂಡು ಬಂದಿರುವುದಿಲ್ಲ. ವರದಿಯನ್ನು **ಅನುಬಂಧ-1** ರಲ್ಲಿ ಲಗತ್ತಿಸಿದೆ. |
| ಆ) | ಕನಕಪುರ ತಾಲ್ಲೂಕು ಸಾತನೂರು ಹೋಬಳಿ ಅಚ್ಚಲು ಗ್ರಾಮ ಪಂಚಾಯಿತಿಯಲ್ಲಿ ರಾಷ್ಟ್ರೀಯ ಗ್ರಾಮೀಣ ಖಾತ್ರಿ ಯೋಜನೆಯ ಅಕ್ರಮಗಳ ಕುರಿತು ತನಿಖೆ ನಡೆಸಲು ರಾಮನಗರ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಯವರು ದಿನಾಂಕ:21.12.2022ರಂದೇ ತನಿಖಾ ತಂಡವನ್ನು ನೇಮಿಸಿದ್ದು ಸದರಿ ತನಿಖಾ ತಂಡವು ಇದುವರೆಗೂ ವರದಿಯನ್ನು ಸಲ್ಲಿಸದೇ ಇದ್ದಲ್ಲಿ, ಸದರಿ ತನಿಖಾ ತಂಡದ ಸದಸ್ಯರ ಮೇಲೆ ಸರ್ಕಾರವು ಕೈಗೊಂಡ ಕ್ರಮಗಳೇನು? (ವಿವರ ನೀಡುವುದು) | |

**ಸಂಖ್ಯೆ: ಸಂಖ್ಯೆ: ಗ್ರಾಅಪ/81(22)/ಉಖಾಯೋ/2024**

(ಪ್ರಿಯಾಂಕ್ ಖರ್ಗೆ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ
ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು

ಅನುಬಂಧ-1

03

ಬಿಕ್ರಮ - 15 ವರದಿ

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
ರಾಮನಗರ ತಾಲ್ಲೂಕು ಪಂಚಾಯಿತಿ ಕಾರ್ಯಾಲಯ, ರಾಮನಗರ ಜಿಲ್ಲೆ

e-mail :- eotprmn@gmail.com ದೂರವಾಣಿ ಸಂಖ್ಯೆ: 080-27272223

ಸಂಖ್ಯೆ: ಕಾನಿಅ/ತಾಪಂರಾ/ಸಿ.ಆರ್ -03/2022-23 ದಿನಾಂಕ: 05.08.2023

ರವರಿಗೆ,
ಮಾನ್ಯ ಮುಖ್ಯ ಲೆಕ್ಕಾಧಿಕಾರಿಗಳು,
ಜಿಲ್ಲಾ ಪಂಚಾಯತ್, ರಾಮನಗರ.

ಮಾನ್ಯರೇ,

**ವಿಷಯ:-** ಕನಕಪುರ ತಾಲ್ಲೂಕಿನ ಅಚ್ಚಲು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ವಿವಿಧ ಯೋಜನೆಗಳಲ್ಲಿ ನಿಯಮ ಉಲ್ಲಂಘನೆಯಾಗಿರುವ ಮತ್ತು ಅವ್ಯವಹಾರ ಆಗಿರುವ ಬಗ್ಗೆ ಪರಿಶೀಲಿಸಿ ವರದಿ ನೀಡುವ ಬಗ್ಗೆ.

**ಉಲ್ಲೇಖ:-**
1. ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ರಾಮನಗರ ಜಿಲ್ಲಾ ಪಂಚಾಯತ್ ರವರ ಪತ್ರ ಸಂಖ್ಯೆ:ರಾಜಿಪಂ/ ಸಿ9/ಎಲ್.ಸಿ.ಕ್ಯೂ/146ನೇಅ/2021-22 ದಿನಾಂಕ:05.01.2023.
2. ಮುಖ್ಯ ಲೆಕ್ಕಾಧಿಕಾರಿ, ಜಿಲ್ಲಾ ಪಂಚಾಯತ್ ರಾಮನಗರ ರವರ ಪತ್ರ ಸಂಖ್ಯೆ:ರಾಜಿಪಂ/ಮುಲೆಅ/ಲೆಶಾ/ಲೆ.ಪ/2022-23, ದಿನಾಂಕ:09.02.2023.
3. ಈ ಕಛೇರಿ ಪತ್ರ ಸಂಖ್ಯೆ: ಕಾನಿಅ/ತಾಪಂರಾ.ಸಿ.ಆರ್-03/2022-23, ದಿನಾಂಕ:25.07.2023.
4. ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಅಚ್ಚಲು ಗ್ರಾಮ ಪಂಚಾಯಿತಿ, ಕನಕಪುರ ತಾಲ್ಲೂಕು ರವರ ಪತ್ರ ಸಂಖ್ಯೆ:ಅ/ಗ್ರಾಪಂ/ / ಪಸಂ/2023-24/49, ದಿನಾಂಕ:28.07.2023.

********

ಮೇಲ್ಕಂಡ ವಿಷಯಕ್ಕೆ ಸಂಬಂಧಪಟ್ಟಂತೆ ಕನಕಪುರ ತಾಲ್ಲೂಕು, ಸಾತನೂರು ಹೋಬಳಿ, ಅಚ್ಚಲು ಗ್ರಾಮ ಪಂಚಾಯಿತಿಯಲ್ಲಿ ವಿವಿಧ ಯೋಜನೆಗಳ ಅನುಷ್ಠಾನದಲ್ಲಿ ನಿಯಮಗಳ ಉಲ್ಲಂಘನೆಯಾಗಿರುವ ಬಗ್ಗೆ ಪರಿಶೀಲಿಸಿ ವರದಿ ನೀಡಲು ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ರಾಮನಗರ ಜಿಲ್ಲಾ ಪಂಚಾಯತ್ ರವರು ಉಲ್ಲೇಖ(1)ರಲ್ಲಿ ಆದೇಶಿಸಿರುವ ಮೇರೆಗೆ ದಿನಾಂಕ:10/02/2023 ರಂದು ಉಲ್ಲೇಖ(2) ರಂತೆ ಅಚ್ಚಲು ಗ್ರಾಮ ಪಂಚಾಯಿತಿಗೆ ಭೇಟಿ ನೀಡಲಾಗಿದ್ದು, ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ 2019-20, 2020-21 ಹಾಗೂ 2021-22ನೇ ಸಾಲಿನಲ್ಲಿ ಅನುಷ್ಠಾನವಾದ ಕಾಮಗಾರಿಗೆ ಸಂಬಂಧಿಸಿದಂತೆ ದೂರು ಅರ್ಜಿಯಲ್ಲಿ ಮಾಡಿರುವ ಆರೋಪಗಳಂತೆ ಪರಿಶೀಲಿಸಲಾಗಿದ್ದು, ಕಂಡುಬಂದ ಅಂಶಗಳನ್ನು ಈ ಕೆಳಕಂಡಂತೆ ದಾಖಲಿಸಲಾಗಿದೆ.

**ಆರೋಪ:-(1)** ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಕಾಮಗಾರಿಗಳಿಗಾಗಿ ಸಾಮಾಗ್ರಿ ವೆಚ್ಚವನ್ನು ಪಂಚಾಯಿತಿ ಅಭಿವೃದ್ಧಿ ಅಧಿಕಾರಿರವರು ತಮ್ಮ ಸಂಬಂಧಿಕರ ಹೆಸರಿನಲ್ಲಿ ಡ್ರಾ ಮಾಡಿ ಪಾವತಿಸಿರುವ ಬಗ್ಗೆ.

**ವರದಿ:-** ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಅಚ್ಚಲು ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ 2019-20, 2020-21 ಹಾಗೂ 2021-22ನೇ ಸಾಲಿನಲ್ಲಿ ಕೈಗೊಂಡ ಕಾಮಗಾರಿಗಳಿಗೆ ಸಾಮಾಗ್ರಿ ಮೊತ್ತ ವಿತರಿಸಿರುವ ಸಂಬಂಧ ಸಾಮಾಗ್ರಿ ಮೊತ್ತವನ್ನು ಪಡೆದ ಸರಬರಾಜುದಾರರ ಮಾಹಿತಿಯನ್ನು ಎಂ.ಐ.ಎಸ್ ನಲ್ಲಿ ಪರಿಶೀಲಿಸಲಾಗಿದ್ದು ಸದರಿ ವಿವರವನ್ನು ಈ ಪತ್ರದೊಂದಿಗೆ ಲಗತ್ತಿಸಲಾಗಿದೆ. ಮುಂದುವರೆದು, ಸದರಿ ಸರಬರಾಜುದಾರರು 2019-20, 2020-21 ಹಾಗೂ 2021-22ನೇ ಸಾಲಿನಲ್ಲಿ ಅಚ್ಚಲು ಗ್ರಾಮ ಪಂಚಾಯಿತಿ ಕಾರ್ಯಲಯದಲ್ಲಿ ಪಂಚಾಯಿತಿ ಅಭಿವೃದ್ಧಿ ಅಧಿಕರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದವರ ಸಂಬಂಧಿಕರೇ? ಎಂಬುವುದರ ಬಗ್ಗೆ ಸಂಬಂಧಪಟ್ಟ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯವರನ್ನು ಪ್ರಶ್ನಿಸಲಾಗಿ ಸದರಿ ಸರಬರಾಜುದಾರರು ತಮ್ಮ ಸಂಬಂಧಿಕರಲ್ಲವೆಂದು ಲಿಖಿತ ಹೇಳಿಕೆ ನೀಡಿ ದೃಢೀಕರಣ ನೀಡಿರುತ್ತಾರೆ ಮತ್ತು ಇದಕ್ಕೆ ಸಂಬಂಧಿಸಿದಂತೆ ಸದರಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ ವಂಶವೃಕ್ಷವನ್ನು ಪಡೆಯಲಾಗಿದ್ದು, ಎಂ.ಐ.ಎಸ್ ನಲ್ಲಿ ಕಂಡುಬಂದ ಸಾಮಗ್ರಿ ಸರಬರಾಜುದಾರರಿಗೂ ವಂಶವೃಕ್ಷದಲ್ಲಿರುವ ಸದಸ್ಯರ ಹೆಸರಿಗೂ ಯಾವುದೇ ತಾಳೆ ಇಲ್ಲದೆ ಇರುವುದರಿಂದ ಲಭ್ಯವಿರುವ ದಾಖಲಾತಿಗಳ ಪ್ರಕಾರ ಮಹಾತ್ಮಗಾಂಧಿ ನರೇಗಾ ಯೋಜನೆಯಡಿ 2019-20, 2020-21 ಹಾಗೂ 2021-22ನೇ ಸಾಲಿನಲ್ಲಿ ಕರ್ತವ್ಯ ನಿರ್ವಹಿಸಿರುವ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ರವರು ತಮ್ಮ ಸಂಬಂಧಿಕರ ಹೆಸರಲ್ಲಿ ಸಾಮಗ್ರಿ ಮೊತ್ತವನ್ನು ಪಡೆದಿರುವುದು ಕಂಡು ಬಂದಿರುವುದಿಲ್ಲ.

[illegible]:-(2) [illegible]
ಕಾಲೇಜು ವಿದ್ಯಾರ್ಥಿಗಳು, ಸರ್ಕಾರಿ ನೌಕರರಿಗೆ ಜಾಬ್ ಕಾರ್ಡ್ ಮಾಡಿಸಿರುವ ಬಗ್ಗೆ.

**ವರದಿ:-** ಮಹಾತ್ಮ ಗಾಂಧಿ ನರೇಗಾ ಯೋಜನೆಯ ಕಾರ್ಯಚರಣೆ ಮಾರ್ಗಸೂಚಿ 2013, 4ನೇ ಆವೃತ್ತಿಯ ಕಂಡಿಕೆ 3.13ರಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ವಾಸಿಸುವ ಕುಟುಂಬಗಳ ಯಾವುದೇ ವಯಸ್ಕ ಸದಸ್ಯರು ನೊಂದಣಿಗಾಗಿ ಅರ್ಜಿ ಸಲ್ಲಿಸಿದ್ದಲ್ಲಿ, ಗ್ರಾಮ ಪಂಚಾಯಿತಿಯಿಂದ ಪರಿಶೀಲಿಸಬೇಕಾದ ಅಂಶಗಳು ಈ ಕೆಳಕಂಡಂತಿರುತ್ತವೆ.

1. ಸದರಿ ಕುಟುಂಬವು ಅರ್ಜಿಯಲ್ಲಿ ತಿಳಿಸಿರುವಂತೆ ನಿಜವಾಗಿಯೂ ಅಸ್ತಿತ್ವದಲ್ಲಿದೆಯೆ,
2. ಅರ್ಜಿ ಸಲ್ಲಿಸಿರುವ ಕುಟುಂಬದವರು ನಿಜವಾಗಿಯೂ ಸಂಬಂಧಪಟ್ಟ ಗ್ರಾಮ ಪಂಚಾಯಿತಿಯ ಸ್ಥಳೀಯ ನಿವಾಸಿಗಳೆ,
3. ಅರ್ಜಿಯಲ್ಲಿ ನಮೂದಿಸಲಾಗಿರುವವರು ಕುಟುಂಬದ ವಯಸ್ಕ ಸದಸ್ಯರೆ, ಎಂಬುವುದರ ಬಗ್ಗೆ ಮಾತ್ರ ಪರಿಶೀಲನ ಮಾಡಿ ಜಾಬ್ ಕಾರ್ಡ್ ವಿತರಣೆ ಮಾಡಲು ತಿಳಿಸಿದ್ದು , ಸರ್ಕಾರಿ ನೌಕರರೇ ಅಥವಾ ಶಾಲಾ ಕಾಲೇಜು ವಿದ್ಯಾರ್ಥಿಗಳೇ ಎಂಬುವುದರ ಬಗ್ಗೆ ಪರಿಶೀಲಿಸಲು ತಿಳಿಸಿರುವುದಿಲ್ಲ. ಒಂದು ವೇಳೆ ವಯಸ್ಕರಲ್ಲದ ವಿದ್ಯಾರ್ಥಿಗಳು ತಪ್ಪು ಮಾಹಿತಿ ನೀಡಿ ಜಾಬ್ ಕಾರ್ಡ್ ಹೊಂದಿರುವ ಬಗ್ಗೆ ನಿಖರ ಮಾಹಿತಿ ನೀಡಿದ್ದಲ್ಲಿ ಸದರಿ ಜಾಬ್ ಕಾರ್ಡಿನಲ್ಲಿ ಅಂತವರನ್ನು ರದ್ದು ಪಡಿಸಲು ಕ್ರಮ ವಹಿಸಬಹುದಾಗಿರುತ್ತದೆ. ಆದರೆ ಸಂಬಂಧಿಸಿದ ದೂರು ಪ್ರತಿಯಲ್ಲಿ ನಿಖರ ಮಾಹಿತಿ ಇರುವುದಿಲ್ಲ. ಮುಂದುವರೆದು ಮಾರ್ಗಸೂಚಿ 2013, 4ನೇ ಆವೃತ್ತಿಯ ಕಂಡಿಕೆ 3.13ರಲ್ಲಿ ತಿಳಿಸಿರುವಂತೆ ಜಾಬ್ ಕಾರ್ಡ್‌ಗಾಗಿ ಅರ್ಜಿ ಸಲ್ಲಿಸಿರುವವರು ವಯಸ್ಕ ಸದಸ್ಯರಾಗಿದ್ದರೆ ಅಂತವರಿಗೆ ಜಾಬ್ ಕಾರ್ಡ್ ವಿತರಿಸಬಹುದು ಎಂದು ತಿಳಿಸಿರುವುದರಿಂದ ವಯಸ್ಕ ಕಾಲೇಜು ವಿದ್ಯಾರ್ಥಿಗಳಿಗೆ ಹಾಗೂ ಸರ್ಕಾರಿ ನೌಕರರಿಗೆ ಜಾಬ್ ಕಾರ್ಡ್ ವಿತರಿಸ ಬಾರದೆಂಬುವುದರ ಬಗ್ಗೆ ಸ್ಪಷ್ಟತೆ ಇರುವುದಿಲ್ಲ. ಮುಂದುವರೆದು, ಅಚ್ಚಲು ಗ್ರಾಮ ಪಂಚಾಯಿತಿಯಲ್ಲಿ 2019-20, 2020-21 ಮತ್ತು 2021-22 ರಲ್ಲಿ ಹೊಸದಾಗಿ ವಿತರಣೆ ಮಾಡಿರುವ ಉದ್ಯೋಗ ಚೀಟಿಗಳ ಮಾಹಿತಿಯನ್ನು ಎಂ.ಐ.ಎಸ್ ವರದಿಯಲ್ಲಿ ಪರಿಶೀಲಿಸಲಾಗಿದ್ದು ಸದರಿ ಸಾಲುಗಳಲ್ಲಿ ಈ ಕೆಳಕಂಡಂತೆ ಹೊಸ ಉದ್ಯೋಗ ಚೀಟಿಗಳನ್ನು ವಿತರಣೆ ಮಾಡಿರುವುದು ಕಂಡುಬಂದಿರುತ್ತದೆ. ಸದರಿ ಸಾಲುಗಳಲ್ಲಿ ವಿತರಣೆ ಮಾಡಿರುವ ಹೊಸ ಉದ್ಯೋಗ ಚೀಟಿಗಳ ಬಗ್ಗೆ ಸಂಬಂಧಪಟ್ಟ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯವರು ತಮ್ಮ ಲಿಖಿತ ಹೇಳಿಕೆಯಲ್ಲಿ ಯಾವುದೇ ಸರ್ಕಾರಿ ನೌಕರರಿಗೆ ಉದ್ಯೋಗ ಚೀಟಿಗಳನ್ನು ನೀಡಿರುವುದಲ್ಲವೆಂದು ದೃಢೀಕರಣ ನೀಡಿರುತ್ತಾರೆ. ಮುಂದುವರೆದು, ಉಲ್ಲೇಖ 3ರಲ್ಲಿ ಈ ಬಗ್ಗೆ ಗ್ರಾಮ ಪಂಚಾಯಿತಿಯಿಂದ ಪರಿಶೀಲಿಸಿ ವರದಿ ನೀಡಲು ಹಾಲಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯವರಿಗೆ ಸೂಚಿಸಿದ್ದು ಸದರಿಯವರು ಉಲ್ಲೇಖ 4ರಲ್ಲಿ ವರದಿ ಸಲ್ಲಿಸುತ್ತಾ, **"ಗ್ರಾಮ ಪಂಚಾಯಿತಿ ಸಿಬ್ಬಂದಿಗಳ ಸಹಯೋಗದೊಂದಿಗೆ ಪರಿಶೀಲನೆ ಮಾಡಿದಾಗ 2019-20ರಿಂದ 2022-23ನೇ ಸಾಲಿನ ವರೆಗೆ ಮಹಾತ್ಮಗಾಂಧಿ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆಯಡಿ ವಿತರಿಸಿರುವ ಉದ್ಯೋಗ ಚೀಟಿಗಳಲ್ಲಿ ಯಾವುದೇ ಅಧಿಕಾರಿಗಳ ಹಾಗೂ ವಿದ್ಯಾರ್ಥಿಗಳ ಹೆಸರಿನಲ್ಲಿ ಜಾಬ್ ಕಾರ್ಡ್ ವಿತರಿಸಿರುವುದು ಕಂಡುಬಂದಿರುವುದಿಲ್ಲವೆಂದು ವರದಿ ಸಲ್ಲಿಸಿರುತ್ತಾರೆ"**. ಈ ಎಲ್ಲಾ ಅಂಶಗಳನ್ನು ತಮ್ಮ ಆದ್ಯ ಅವಗಾಹನೆಗೆ ತರಬಯಸುತ್ತಾ 2019-20, 2020-21 ಮತ್ತು 2021-22ನೇ ಸಾಲಿನಲ್ಲಿ ವಿತರಣೆಯಾಗಿರುವ ಹೊಸ ಉದ್ಯೋಗ ಚೀಟಿಗಳ ಮಾಹಿತಿಯನ್ನು ಈ ಕೆಳಕಂಡಂತೆ ದಾಖಲಿಸಿ ತಮ್ಮ ಮುಂದಿನ ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.

| **ಕ್ರ.ಸಂ.** | **ಆರ್ಥಿಕ ಸಾಲು** | **ವಿತರಣೆ ಮಾಡಲಾದ ಹೊಸ ಉದ್ಯೋಗ ಚೀಟಿಗಳ ಸಂಖ್ಯೆ** |
|---|---|---|
| 1 | 2019-20 | 47 |
| 2 | 2020-21 | 137 |
| 3 | 2021-22 | 87 |

**ಲಗತ್ತು:-**

1. ನರೇಗಾ ಎಂ.ಐ.ಎಸ್ ವರದಿಯಂತೆ 2019-20, 2020-21 ಹಾಗೂ 2021-22ರ ಸಾಮಾಗ್ರಿ ಮೊತ್ತ ಪಾವತಿಯಾಗಿರುವ ಸರಬರಾಜುದಾರರ ಮಾಹಿತಿ ಪ್ರತಿ.
2. 2019-20, 2020-21 ಹಾಗೂ 2021-22ರಲ್ಲಿ ವಿರಣೆಯಾಗಿರುವ ಹೊಸ ಉದ್ಯೋಗ ಚೀಟಿಗಳ ಎಂ.ಐ.ಎಸ್ ಮಾಹಿತಿ ಪ್ರತಿ.
3. ಸಂಬಂಧಪಟ್ಟ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ ದೃಢೀಕರಣ ಪತ್ರ ಹಾಗೂ ವಂಶವೃಕ್ಷದ ಪ್ರತಿ.
4. ಉಲ್ಲೇಖಿತ ಪತ್ರಗಳು.

ವಂದನೆಗಳೊಂದಿಗೆ,

**ತಮ್ಮ ನಂಬುಗೆಯ,**

5/5/23

ಸಹಾಯಕ ನಿರ್ದೇಶಕರು(ಗ್ರಾ.ಉ)
ತಾಲ್ಲೂಕು ಪಂಚಾಯಿತಿ, ರಾಮನಗರ